(ಈ) ಜಿಲ್ಲಾ ಸಹಕಾರಿ ಬ್ಯಾಂಕಿನಿಂದ ಎರವಲು ಪಡೆದು ಒಬ್ಬ ಮ್ಯಾನೇಜರ್ ಮತ್ತು ಕೇಂದ್ರ ಸಹಕಾರೀ ಬ್ಯಾಂಕ್ ಹಾಗೂ ಸರಕಾರದ ಪರ, ಒಬ್ಬೊಬ್ಬ ಪ್ರತಿನಿಧಿಗಳು ಕಾರ್ಯಕಾರೀ ಮಂಡಲಿಯಲ್ಲಿ ನೇಮಕಗೊಂಡಿರುತ್ತಾರೆ ಹಾಗೂ ಸಂಘದ ಲೆಕ್ಕವನ್ನು ನಿಯಮಿತ ಕಾರ್ಯಕ್ರಮದ ಪ್ರಕಾರ ಆಡಿಟ್ ನಡೆಯಲು ಕಾರ್ಯಕ್ರಮ ಇಟ್ಟಿರುತ್ತೆ :

ಅಕ್ರಮ ದಾಸ್ತಾನು ಸಂಗ್ರಹಣೆ ಪತ್ತೆ

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ).—

11. (18) ಆಹಾರ ಹಾಗೂ ನಿತ್ಯೋಪಯೋಗಿ ಸರಬರಾಜು ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೇ.—

(ಅ) ಕಳೆದ ಒಂದು ವರ್ಷದಿಂದ ಅಗತ್ಯವಸ್ತು ಕಾಯಿದೇ ಉಲ್ಲಂಘಿಸಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ವರ್ತಕರು ಎಷ್ಟೆಷ್ಟು ಧಾನ್ಯಗಳನ್ನು (ಭತ್ತ, ಅಕ್ಕಿ, ರಾಗಿ, ಜೋಳ, ಸಕ್ಕರೆ ಮತ್ತು ಸೀಮೆಎಣ್ಣೆ) ಅಕ್ರಮವಾಗಿ ಶೇಖರಿಸಿಟ್ಟಿದ್ದರು ;

(ಆ) ಈ ರೀತಿ ಅಕ್ರಮವಾಗಿ ಶೇಖರಿಸಿಟ್ಟಿದ್ದ ಅಗತ್ಯ ದಾಸ್ತಾನುಗಳು ಪತ್ತೆ ಹಚ್ಚಿ ಪೋಲೀಸರು ವಶಪಡಿಸಿಕೊಂಡ ದಾಸ್ತಾನುಗಳ ಪ್ರಮಾಣವೆಷ್ಟು ;

(ಇ) ಈ ರೀತಿ ಅಕ್ರಮವಾಗಿ ಶೇಖರಿಸಿಟ್ಟಿದ್ದ ವರ್ತಕರುಗಳ ಮೇಲೆ ಪೋಲೀಸಿನವರು ಹೂಡಿರುವ ಮೊಕದ್ದಮೆಗಳೆಷ್ಟು ;

(ಈ) ಯಾವ ಯಾವ ಮೊಕದ್ದಮೆಗಳಲ್ಲಿ ಯಾವ ಯಾವ ವರ್ತಕರಿಗೆ ಯಾವ ಯಾವ ರೀತಿಯ ಶಿಕ್ಷೆ ಕೊಡಲಾಗಿದೆ?

ಆಹಾರ ಹಾಗೂ ನಿತ್ಯೋಪಯೋಗಿ ಸರಬರಾಜು ರಾಜ್ಯ ಮಂತ್ರಿಗಳು (ಶ್ರೀಮತಿ ಇವಾವಾಜ್).—

ಉತ್ತರ.—(ಅ) (ಆ) ವಿವರಗಳಿಗೆ ಲಗತ್ತಿಸಿರುವ ಪಟ್ಟಿಯನ್ನು ವಿಧಾನಸಭೆಯ ಗ್ರಂಥಾಲಯದಲ್ಲಿಡಲಾಗಿದೆ.

(ಇ) 928 ಮೊಕದ್ದಮೆಗಳು.

(ಈ) ವಿವರಗಳಿಗೆ ಲಗತ್ತಿಸಿರುವ ಪಟ್ಟಿಯನ್ನು ವಿಧಾನಸಭೆಯ ಗ್ರಂಥಾಲಯದಲ್ಲಿಡ ಲಾಗಿದೆ.

ಪ್ರಾಥಮಿಕ ಕಡ್ಡಾಯ ಶಿಕ್ಷಣ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್ (ಶಿರ್ಸಿ) :—

12. (20).—ಮಾನ್ಯ ವಿದ್ಯಾಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ರಾಜ್ಯದಲ್ಲಿ ಪ್ರಾಥಮಿಕ ಕಡ್ಡಾಯ ಶಿಕ್ಷಣ ಕಾಯಿದೆ ಅನುಸರಿಸಿ 1971–72ನೆಯ ಸಾಲಿನಲ್ಲಿ ಶಾಲೆಗೆ ಸೇರಲು ಅರ್ಹತೆ ಪಡೆದಿರುವ ವಯಸ್ಸಿನ ಹೆಣ್ಣು ಮತ್ತು ಗಂಡು ಮಕ್ಕಳೆಷ್ಟು